# ಎಪಿವೈ ನಾಗರೀಕರ ಸನ್ನದು

## ಈ ಬ್ಯಾಂಕ್- ಶಾಖೆಯ ಮೂಲಕ ಸೇವೆಗಳನ್ನು ಒದಗಿಸುವ ಬದ್ಧತೆ

**I. ಹೊಸ ಎಪಿವೈ ಖಾತೆ ತೆರೆಯುವುದು**

- 18 ರಿಂದ 40 ವರ್ಷದೊಳಗಿನ ಎಲ್ಲಾ ಸಂಭಾವ್ಯ ಎಪಿವೈ ಚಂದಾದಾರರಿಗೆ ಎಪಿವೈನ ಪ್ರಯೋಜನಗಳು ಮತ್ತು ವೈಶಿಷ್ಟ್ಯಗಳನ್ನು ವಿವರಿಸುವುದು.
- ದಾಖಲಾತಿಗಾಗಿ ಸಂಭಾವ್ಯ ಎಪಿವೈ ಚಂದಾದಾರರಿಗೆ ಎಪಿವೈ ಚಂದಾದಾರರ ನೋಂದಣಿ ಫಾರ್ಮ್ ಅನ್ನು ಒದಗಿಸುವುದು
- ಎಪಿವೈ ಖಾತೆ ತೆರೆಯುವಾಗ ಚಂದಾದಾರರಿಗೆ ಸ್ವೀಕೃತಿ ರಶೀದಿ ಮತ್ತು ಚಂದಾದಾರರ ಮಾಹಿತಿ ಕರಪತ್ರವನ್ನು ಒದಗಿಸುವುದು.
- ಎಪಿವೈ ಖಾತೆ ತೆರೆದ ನಂತರ ಇ-ಪ್ರಾಣ್ ಕಾರ್ಡ್ ಒದಗಿಸುವುದು.
- ಅಸ್ತಿತ್ವದಲ್ಲಿರುವ ಚಂದಾದಾರರ (ಸಂಗಾತಿ ಮತ್ತು ಮಕ್ಕಳು) ಅರ್ಹ ಕುಟುಂಬ ಸದಸ್ಯರಿಗೆ ಎಪಿವೈನ ಪ್ರಯೋಜನಗಳು ಮತ್ತು ವೈಶಿಷ್ಟ್ಯಗಳನ್ನು ವಿವರಿಸುವುದು ಮತ್ತು ಎಪಿವೈ ಖಾತೆಗಳನ್ನು ತೆರೆಯಲು ಅವರಿಗೆ ಅನುಕೂಲ ಕಲ್ಪಿಸುವುದು.
- ಸ್ವಯಂ-ಡೆಬಿಟ್‌ನ ಆಯ್ದ ಆವರ್ತನದ ಪ್ರಕಾರ ಕೊಡುಗೆ ಮೊತ್ತಕ್ಕೆ ಸಮನಾದ ಸಾಕಷ್ಟು ಮೊತ್ತವನ್ನು ತಮ್ಮ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲು ಚಂದಾದಾರರಿಗೆ ತಿಳಿಸುವುದು.

**II. ಶೇಖರಣಾ ಹಂತದಲ್ಲಿನ ಸೇವೆಗಳು**

- ಎಪಿವೈ ಚಂದಾದಾರರ ಕೋರಿಕೆಯ ಮೇರೆಗೆ ಖಾತೆಗಳ ಹೇಳಿಕೆಯನ್ನು ಒದಗಿಸುವುದು.

- ಸಂಬಂಧಿಸಿದ ಬದಲಾವಣೆಗಳಿಗಾಗಿ ಎಪಿವೈ ಚಂದಾದಾರರ ಪರಿಷ್ಕರಣೆ ಫಾರ್ಮ್ ಅನ್ನು ಒದಗಿಸುವುದು:
  - (I) ನಾಮನಿರ್ದೇಶಿತರ/ ಸಂಗಾತಿಯ ವಿವರಗಳಲ್ಲಿ ಬದಲಾವಣೆ / ತಿದ್ದುಪಡಿ,
  - (II) ಆವರ್ತನದಲ್ಲಿ ಬದಲಾವಣೆ / ತಿದ್ದುಪಡಿ,
  - (III) ಹುಟ್ಟಿದ ದಿನಾಂಕದಲ್ಲಿನ ಬದಲಾವಣೆ / ತಿದ್ದುಪಡಿ,
  - (iv) ಪಿಂಚಣಿ ಮೊತ್ತದ ಹೆಚ್ಚಳ / ಇಳಿಕೆ,
  - (v ಬ್ಯಾಂಕ್ / ಎಪಿವೈ ಸೇವಾ ಪೂರೈಕೆದಾರರ ಬದಲಾವಣೆ

- ಎಪಿವೈ ಖಾತೆಯಲ್ಲಿ ಬ್ಯಾಂಕ್ ಖಾತೆಯ ಪ್ರಸ್ತುತ ವಿವರಗಳ ನವೀಕರಣ.
- ಪಿಂಚಣಿ ಮೊತ್ತವನ್ನು ಹೆಚ್ಚಿಸಿದ ಸಂದರ್ಭದಲ್ಲಿ  ಒಟ್ಟು ಮೊತ್ತ ಮತ್ತು ಡೌನ್-ಗ್ರೇಡೇಶನ್‌ನ ಸಂದರ್ಭದಲ್ಲಿ ಎಸ್‌ಬಿ ಖಾತೆಗಳಲ್ಲಿ ಜಮಾ ಮಾಡಬೇಕಾದ ಅಂದಾಜು ಮೊತ್ತವನ್ನು ಲೆಕ್ಕಹಾಕಲು ಸಹಾಯವನ್ನು ಒದಗಿಸುವುದು
- ಅನಿಯಮಿತ ಎಪಿವೈ ಖಾತೆಗಳ ಸಂದರ್ಭದಲ್ಲಿ, ಎಪಿವೈ ಖಾತೆಯ ನಿರಂತರತೆಯ ಪ್ರಾಮುಖ್ಯತೆ ಮತ್ತು ಒಟ್ಟು ಮೊತ್ತ ಮತ್ತು ವಿಳಂಬ ಶುಲ್ಕವನ್ನು ಲೆಕ್ಕ ಮಾಡಲು ಸಹಾಯ ಮಾಡುವ ಬಗ್ಗೆ ಎಪಿವೈ ಚಂದಾದಾರರಿಗೆ ತಿಳಿಸುವುದು.
- ನಿಯಮಗಳಲ್ಲಿ ಸೂಚಿಸಿದಂತೆ ಅವಧಿದೊಳಗೆ ಚಂದಾದಾರರ ಕುಂದುಕೊರತೆಯ ಪರಿಹಾರವನ್ನು ಖಚಿತಪಡಿಸುವುದು.

**III. ಎಪಿವೈ ಅಡಿಯಲ್ಲಿ ನಿರ್ಗಮನ**

- ಎಪಿವೈ ಅಡಿಯಲ್ಲಿ ಸ್ವಯಂಪ್ರೇರಿತ ನಿರ್ಗಮನ ಫಾರ್ಮ್ ಗಾಗಿ ಫಾರ್ಮ್ ಅನ್ನು ಒದಗಿಸುವುದು.
- ಅಸ್ತಿತ್ವದಲ್ಲಿರುವ ಎಪಿವೈ ಚಂದಾದಾರರ ಸಾವಿನ ಸಂದರ್ಭಗಳಲ್ಲಿ, ಎಪಿವೈ ಅಡಿಯಲ್ಲಿ ಖಾತೆ ಮುಚ್ಚುವ ಫಾರ್ಮ್ (ಡೆತ್ ಕೇಸ್) / ಸಂಗಾತಿಯ ಮುಂದುವರಿಕೆಯ ಫಾರ್ಮ್ ಅನ್ನು ಒದಗಿಸುವುದು.
- ಎಪಿವೈ ಖಾತೆಂದ ನಿರ್ಗಮಿಸಿದ ನಂತರ ಜಮೆಯಾದ ನಿಧಿಗಳನ್ನು ಖಾತೆಗೆ ವರ್ಗಾಸಿದ ನಂತರ ಎಸ್‌ಬಿ ಖಾತೆಯನ್ನು ಮುಚ್ಚುವಂತೆ ಎಪಿವೈ ಚಂದಾದಾರರಿಗೆ ತಿಳಿಸುವುದು.

**iv. ಎನ್‌ಪಿಎಸ್ ಸ್ವಾವಲಂಬನ್ ಮತ್ತು ಎಪಿವೈ**

- ಪ್ರಸ್ತುತ 18-40 ವರ್ಷ ವಯಸ್ಸಿನ ಅರ್ಹ ವಯಸ್ಸಿನವರಾಗಿರುವ ಅಸ್ತಿತ್ವದಲ್ಲಿರುವ ಎನ್‌ಪಿಎಸ್ ಲೈಟ್-ಸ್ವಾವಲಂಬನ್ ಚಂದಾದಾರರಿಗೆ ಅಟಲ್ ಪಿಂಚಣಿ ಯೋಜನೆಗೆ ವಲಸೆ ಹೋಗಲು ಮಾಹಿತಿ ನೀಡುವುದು
- ಅರ್ಹ ಚಂದಾದಾರರಿಂದ ಪಡೆದ ವಲಸೆ ವಿನಂತಿಯನ್ನು ಪ್ರಕ್ರಿಯೆಗೊಳಿಸುವುದು ಮತ್ತು ಎನ್‌ಪಿಎಸ್ ಲೈಟ್-ಸ್ವಾವಲಂಬನ್‌ನಿಂದ ಎಪಿವೈಗೆ ಎನ್‌ಪಿಎಸ್ ಲೈಟ್-ಸ್ವಾವಲಂಬನ್‌ನ  ಉಳಿದ ಬಾಕಿಯೊಂದಿಗೆ ಯಶಸ್ವಿ ವಲಸೆಯನ್ನು ಖಾತ್ರಿಪಡಿಸುವುದು.

**v. ಎಪಿವೈ ಅಪ್ಲಿಕೇಶನ್, ಅದರ ಡೌನ್‌ಲೋಡ್ ಮತ್ತು ಪ್ರಯೋಜನಗಳ ಕುರಿತು ಮಾhiತಿ**

- ಎನ್‌ಎಸ್‌ಡಿಎಲ್‌ನ ಎಪಿವೈ ಅಪ್ಲಿಕೇಶನ್‌ನ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳನ್ನು ತಿಳಿಸುವುದು ಮತ್ತು ಪ್ಲೇ ಸ್ಟೋರ್‌ನಲ್ಲಿ ಅದರ ಲಭ್ಯತೆಯನ್ನು ಸಹ ತಿಳಿಸುವುದು.

**vi ಸಂಪರ್ಕ ವಿವರಗಳು**

ಎಪಿವೈ ಕುಂದುಕೊರತೆಗಳನ್ನು ನೋಂದಾಸಲು: **www.npscra.nsdl.co.in>>Home>>select:   NPS Lite**

- ಪಿಎಫ್‌ಆರ್‌ಡಿಎಯ ಎಪಿವೈ ಹೆಲ್ಪ್ ಡೆಸ್ಕ್ (ಟೋಲ್ ಫ್ರೀ): 1800 110 069

ಪಿಎಫ್‌ಆರ್‌ಡಿಎ ವೆಬ್‌ಸೈಟ್: **www.pfrda.org.in**